ಎಚ್.ಸಿದ್ಧಾರ್ಥ ಹೆಬ್ಬಾರ್, ಈದು

*ಚಿದಂಬರ ರಹಸ್ಯ ಎಂದರೇನು?*



ಚಿದಂಬರಂ ಅವರನ್ನು ಕೇಳಿದರೆ 2ಜಿ ಹಗರಣ ರಹಸ್ಯ ಬಯಲಾಗಬಹುದು!

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಎರಡೂ ಸಾವೇ ಆದರೂ ಯಾವುದು ಒಳ್ಳೆಯದು ಕೊಲೆಯೋ, ಆತ್ಮಹತ್ಯೆಯೋ?*

ಎರಡೂ ಬೇಡ. ಹೈಟೆಕ್ ಹಾಸ್ಪಿಟಲ್‌ಗೆ ಹೋಗಿ ಹಾರ್ಟ್ ಅಟ್ಯಾಕ್ ಆದವರ ಟ್ರೀಟ್‌ಮೆಂಟ್ ಬಿಲ್ ನೋಡಿರಿ, ತಕ್ಷಣ ಮರಣ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಎಲ್ಲಾ ದೇವರುಗಳಿಗೂ ಮಂದಿರಗಳಿರುವ ನಮ್ಮ ದೇಶದಲ್ಲಿ ಯಮಧರ್ಮನಿಗೆ ಏಕಿಲ್ಲ?*

ಇಲ್ಲದೇ ಏನು! ಅದನ್ನು ನಾವು ನರ್ಸಿಂಗ್ ಹೋಂ ಎಂದು ಕರೆಯುತ್ತೇವಷ್ಟೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಅಂದಿನ ಲವರ್ಸ್‌ಗೂ, ಇಂದಿನ ಲವರ್ಸ್‌ಗೂ ಇರುವ ವ್ಯತ್ಯಾಸವೇನು?*

ಕನಿಷ್ಠ ಇಪ್ಪತ್ತು ವರ್ಷಗಳು!

ಎಂ.ಎಸ್. ಮಂಜರ್, ಬಂಡಳ್ಳಿ

*ರಾಜಕಾರಣಿಗೂ, ಗೋಸುಂಬೆಗೂ ಇರುವ ವ್ಯತ್ಯಾಸವೇನು?*



ರಾಜಕಾರಣಿಗಳ ಬಣ್ಣ ಬದಲಾಗುವುದು ಮೇಲ್ನೋಟಕ್ಕೆ ಕಾಣಿಸುವುದಿಲ್ಲ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಿಮ್ಮನ್ನು ಮದುವೆಯಾಗಬೇಕೆಂದು ಈವರೆಗೆ ಯಾವ ಶೂರ್ಪನಖಿಯೂ ಪೀಡಿಸಿಲ್ಲವಾ?*

ಬಂದಿದ್ದಳು. ನಾನು ಸಾಹಿತಿ ಎಂದೆ; ಕವನ ಓದುತ್ತೇನೆ ಎಂದೆ; ಹೆದರಿದ ಹುಲ್ಲೆಯಂತೆ ಲಂಕೆಗೆ ಓಡಿಹೋದಳು!

ಶಿಲ್ಪಿ ರಮೇಶ್, ಹನುಮನಾಳು

*ಹಿಂದೆ 108 ಪತ್ರ ಬರೆದಿದ್ದಳು, ಈಗ ಮೊಬೈಲ್‌ಗೆ 108 ಸಂದೇಶ ಕಳುಹಿಸಿದ್ದಾಳೆ, ಮುಂದೆ...?*

ಕೈ ಹಿಡಿದರೆ ದಿನವೂ ಅಷ್ಟೋತ್ತರ, ಕೈ ಕೊಟ್ಟರೆ ಮತ್ತೆ ಅದೇ ಸಂಖ್ಯೆ ಆಂಬುಲೆನ್ಸ್‌ಗಾಗಿ ಕರೆ!

ಎನ್. ಗೋಪಾಲರಾವ್, ಬೆಂಗಳೂರು

*ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೇ ಕೋಟಿ ರೂಪಾಯಿ. ಹೆಚ್ಚು ಹೆಂಡತಿಯರು ಮನೆಯೊಳಗಿದ್ದರೆ ಏನು ರಾಮಣ್ಣ?*

ಅಡಿಗಡಿಗೆ ಜಗಳದಲ್ಲಿ ಅಡಿಗೆಯೂ ಇಲ್ಲ, ಹಿಡಿಯಿರಿ ಬಾಯಿಗೆ ಮಣ್ಣ!

ಎಸ್. ಕೃಷ್ಣಮೂರ್ತಿ, ಬೆಂಗಳೂರು

*ಹೆಣ್ಣಿನ ಯಾವ ಭಾಗದಲ್ಲಿ ಸೌಂದರ್ಯ ಎಂಬುದು ಎದ್ದು ಕಾಣುತ್ತದೆ?*

ನೀವು ಕಾಮಿಯಾದರೆ ಕೆಲವೇ ಭಾಗಗಳಲ್ಲಿ, ಕಲಾವಿದನಾದರೆ ಇಡೀ ಹೆಣ್ಣಿನಲ್ಲಿ, ಸ್ಕಿನ್ ಡಾಕ್ಟರ್ ಆದರೆ ಇಡೀ ಚರ್ಮದಲ್ಲಿ, ಕವಿಯಾದರೆ ಪ್ರತಿ ನಿಲುವಿನಲ್ಲಿ ಸೌಂದರ್ಯ ಕಾಣುತ್ತದೆ.

ಎಚ್. ಆನಂದಕುಮಾರ್, ಚಿತ್ರದುರ್ಗ

*ರಾಮ್‌ಜೀ, ವಿಸ್ಕಿ, ಬ್ರಾಂದಿ, ರಮ್ ಯಾವ ವಿಟಮಿನ್‌ಗೆ ಸೇರುತ್ತದೆ?*

ವಿಟಮಿನ್ ಎಂ– ಮಾರುವವರಿಗೆ!

ವಿಷ್ಣು ಶಂಕರ್, ಶಿವಮೊಗ್ಗ

*ರಾಜಕಾರಣಿಗಳು ತಮ್ಮ ಮಕ್ಕಳನ್ನು ಏಕೆ ಸೈನ್ಯಕ್ಕೆ ಸೇರಿಸುವುದಿಲ್ಲ?*

ಕುಡುಕರು, ಸೋಮಾರಿಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದಿಲ್ಲ.

ಸಾವಿತ್ರಿ ಜನವಾಡಕರ್, ಗುಲ್ಬರ್ಗಾ

*ಜನಸಂಖ್ಯೆ ಕಡಿಮೆ ಮಾಡುವ ಉಪಾಯ ಯಾವುದಾದರೂ ಇದ್ದರೆ ತಿಳಿಸಿ ಆಧುನಿಕ ಚಾಣಕ್ಯರೇ...?*

ಮಾನವ ಕುಲ ಒಂದೇ ವಲಂ, ಒಂದು ಕುಟುಂಬಕೆ ಒಂದೇ ಶಿಶುಂ ಎಂದು ಇಡೀ ಜಗತ್ತು ಅನುಸರಿಸಿದರೆ ಸಾಕು.

ಎಸ್.ಜಿ. ಕರನಂದಿ, ಹುನಗುಂದ

*ಅಂತರ್ಜಲಕ್ಕೂ, ಬ್ಯಾಂಕಿನ ಉಳಿತಾಯ ಖಾತೆಗೂ ಇರುವ ವ್ಯತ್ಯಾಸವೇನು?*

ಉಳಿತಾಯ ಖಾತೆಯಲ್ಲಿ ಮಿನಿಮಮ್ ಬ್ಯಾಲೆನ್ಸ್ ಬಿಟ್ಟಿರುತ್ತಾರೆ. ಅಂತರ್ಜಲವನ್ನು ಇದ್ದಷ್ಟೂ ಗೋರುತ್ತಾರೆ!

## ಬಹುಮಾನಿತ ಪ್ರಶ್ನೆ

ಎನ್.ಎಮ್. ಪೈ, ಕಾಸರಕೋಡ

*ಬಹುತೇಕ ಸಮಾರಂಭಗಳಲ್ಲಿ ಅಡುಗೆ ಮಾಡುವವರು ಗಂಡಸರೇ. ಯಾಕೆ...?*

ಹೆಂಗಸರೇ ಮಾಡಿದರೆ, ಆ ಅಡುಗೆಯನ್ನು ಪತಿಯರು ತಂತಮ್ಮ ಸತಿಯರ ಮುಂದೆ ಹೊಗಳಿದರೆ, ಹಲವಾರು ಗೃಹಭಂಗಗಳು ಆಗುತ್ತವಲ್ಲಾ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಕೆಲವರು ಸತ್ತರೆ ದೆವ್ವ ಪಿಶಾಚಿ ಆಗ್ತಾರೆ ಅಂತಾರಲ್ಲಾ, ಹಾಗಾದರೆ ಸತ್ತ ಪ್ರಾಣಿ, ಪಕ್ಷಿಗಳು ಏನಾಗ್ತವೆ ಸಾರ್?*

ತಿಂದವರ ಮೈಯಲ್ಲಿ ಜೀರ್ಣವಾಗ್ತವೆ!

ಆರ್. ಮಧುಸೂದನ್, ಹಾಸನ

*ಸೈಟ್ ಖರೀದಿ ಮಾಡಕ್ಕೂ, ಮದುವೆ ಮಾಡಿಕೊಳ್ಳಕ್ಕೂ ಸಾಮ್ಯತೆ ಏನು?*

ಸೈಟನ್ನೇ ಆಗಲಿ, ಸಂಗಾತಿಯನ್ನೇ ಆಗಲಿ, ರಿಜಿಸ್ಟ್ರೇಷನ್ ಆದ ತಕ್ಷಣ ನಿಮ್ಮ ಸುಪರ್ದಿಗೆ ತೆಗೆದುಕೊಳ್ಳದಿದ್ದರೆ ಪರರ ಅಧೀನವಾಗಿಬಿಡಬಹುದು!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ಗ್ರಹಗಳಿಗೂ, ಉಪಗ್ರಹಗಳಿಗೂ ಇರುವ ವ್ಯತ್ಯಾಸವೇನು?*



ಮಂತ್ರಿ ಗ್ರಹ, ಚೇಲಾ ಉಪಗ್ರಹ.

ವಿಜಯ್ ನರಹರಿ, ಆಸುಂಡಿ

*ಪುಂಗಿ ಊದಿದರೆ ಹಾವು ಬರುತ್ತೆ. ಹುಡುಗಿಗೆ ಐ ಲವ್ ಯೂ ಅಂದ್ರೆ?*

ಹಾವುಗೆ ಕೈಗೆ ಬರುತ್ತೆ!

ಮುರಲೀಧರ ಕುಲಕರ್ಣಿ, ಬೀದರ್

*ದೇವಸ್ಥಾನಗಳಿಗೆ ಹೋಗಿ ಬರುವ ಯಾತ್ರಿಕರ ವಾಹನಗಳಿಗೆ ಹೆಚ್ಚಾಗಿ ಅಪಘಾತಗಳಾಗುತ್ತಿವೆಯಲ್ಲಾ, ಏಕೆ?*

ಡ್ರೈವ್ ಮಾಡುವಾಗಲೂ ಡ್ರೈವರ್ ಆ ದೇವನನ್ನು ಭಕ್ತಿಪರವಶನಾಗಿ ಕಣ್ಣುಮುಚ್ಚಿ ನೆನೆಯುತ್ತಿದ್ದನಂತೆ!

■ ರಾಮ್